# ಶ್ರೇಷ್ಠತೆಯ ವ್ಯಸನ

ನಮ್ಮ ದೇಶಕ್ಕೆ ಈಗ ಶ್ರೇಷ್ಠತೆಯ ವ್ಯಸನ ಅಮರಿಕೊಂಡಿದೆ. ನಮ್ಮನ್ನಾಳುವವರಿಗೆ ತಕ್ಷಣದಲ್ಲಿ ದೇಶ ಜಗತ್ತಿನಲ್ಲಿ ಏಕಮೇವಾದ್ವಿತೀಯ (numero uno) ಆಗಿಬಿಡಬೇಕು. ಜಗತ್ತಿನ ಎಲ್ಲಾ ರಾಷ್ಟ್ರಗಳು ನಮ್ಮ ನಾಯಕನತ್ತ ಸಹಾಯ ಹಸ್ತ ಚಾಚಬೇಕು. ಅದಕ್ಕಾಗಿ ಏನೆಲ್ಲ ಕಸರತ್ತು ನಡೆಯುತ್ತಿದೆ. ಆದರೆ ನಮಗಿರುವ ಮೂಲಬಂಡವಾಳ ಒಂದೆ; ಅದು ಜನಸಂಖ್ಯೆ (demography). ಅದರಲ್ಲೂ ದುಡಿಯುವ ಸಮುದಾಯವಾದ ಯುವಶಕ್ತಿ ಇದೆ. ನಮ್ಮದು ವಿಶ್ವದಲ್ಲಿಯೆ ದೊಡ್ಡ ಪ್ರಜಾಪ್ರಭುತ್ವ, ಆದ್ದರಿಂದ ನಾವು ಬಲಿಷ್ಠರು. ಒಂದು ರಾಷ್ಟ್ರವನ್ನು ಶ್ರೇಷ್ಠಮಟ್ಟಕ್ಕೆ ಕೊಂಡೊಯ್ಯಲು ಇಷ್ಟು ಸಾಕೆ? ನಮ್ಮ ಜನಸಂಖ್ಯೆಯ ಬೌದ್ಧಿಕ ಮತ್ತು ಶಾರೀರಿಕ ಗುಣಮಟ್ಟಗಳೇನು? ಪ್ರಜಾಪ್ರಭುತ್ವ ನಿಜಕ್ಕೂ ಜಾತಿಪದ್ಧತಿಯನ್ನು ಭೇದಿಸಿಕೊಂಡು ಪೂರ್ಣಪ್ರಮಾಣದಲ್ಲಿ ಕೆಲಸಮಾಡಲು ಶಕ್ಯವಿದೆಯೆ? ಇವು ಯಾವುವೂ ನಮ್ಮನ್ನು ಬಾಧಿಸುವುದಿಲ್ಲ.

ಭಾರತವನ್ನು ಶಿಷ್ಟ ಮತ್ತು ಪರಿಶಿಷ್ಟ(ಜಾನಪದ) ಎಂದು ಎರಡು ಭಾಗವಾಗಿ ವಿಂಗಡಿಸಬಹುದು. ಶಿಷ್ಟ ಭಾರತ ಉನ್ನತ ಶಿಕ್ಷಣ ಪಡೆದ ಬಂಡವಾಳಶಾಹಿ(ಪರ) ಮತ್ತು ಮಧ್ಯಮವರ್ಗವನ್ನೊಳಗೊಂಡಿದೆ. ಅರೆಅಕ್ಷರಸ್ಥ ಮಧ್ಯಮವರ್ಗ, ನಗರದ ಕೂಲಿಕಾರ್ಮಿಕರು, ಅನಕ್ಷರಸ್ಥ ಗ್ರಾಮೀಣ ಬಡವರು, ಕಡುಬಡವರು ಇವರನ್ನೊಳಗೊಂಡ ಪರಿಶಿಷ್ಟ ಭಾರತವಿದೆ. ಮೊದಲನೆಯ ವರ್ಗ ಅಲ್ಪಸಂಖ್ಯಾತವೆಂಬುದು ನಿರ್ವಿವಾದ. 80:20ರ ಪ್ರಮೇಯವನ್ನು ಬಳಸಿ ಹೇಳುವುದಾದರೆ ಶೇ. 20 ರಷ್ಟಿರುವ ಇವರ ಬಳಿ ದೇಶದ ಶೇ. 80 ರಷ್ಟು ಸಂಪನ್ಮೂಲ ಇದೆ. ಇವರೇ ಉತ್ಪಾದಕರು, ಅನುಭೋಗಿಗಳು. ದೇಶದ ಪ್ರಗತಿ ಸೂಚ್ಯಂಕವನ್ನು ಸೃಷ್ಟಿಸುವವರು ಇವರೆ. ರಾಜಕೀಯದ ಪರೋಕ್ಷ ನಿಯಂತ್ರಣವೂ ಇವರ ಕೈಯಲ್ಲೆ ಎಂಬುದನ್ನು ಹೇಳಬೇಕಾಗಿಲ್ಲವಷ್ಟೆ. ಈ ಭಾರತದ ಜೀವನಮಟ್ಟ ಮುಂದುವರೆದ ಯೂರೋಪಿನ ಚಿಕ್ಕ ದೇಶವೊಂದಕ್ಕೆ ಸಮ. ಇದು ಇಂಜಿನ್ ಎಂದುಕೊಂಡರೆ ಶೇ. 80 ರಷ್ಟಿರುವ ಎರಡನೆಯ ಭಾರತದ ವರ್ಗಗಳು ಬೋಗಿಗಳಿದ್ದಂತೆ.

ಇತ್ತೀಚಿನ ವರದಿಯೊಂದು ಭಾರತ ಸಾಯಲೂ ಯೋಗ್ಯ ಸ್ಥಳವಲ್ಲ ಎಂದು ಹೇಳುತ್ತದೆ. ಘಾನಾ, ತಾಂಜೇನಿಯಾ, ಜಿಂಬಾಬ್ವೆಗಳಂತಹ ಪುಟ್ಟ ದೇಶಗಳಲ್ಲಿ ಭಾರತಕ್ಕಿಂತ ಶಾಂತಿ ಹಾಗೂ ಘನತೆಯಿಂದ ಕೊನೆಯುಸಿರೆಳೆಯಬಹುದಂತೆ. ದಿ ಎಕನಾಮಿಸ್ಟ್ ನಿಯತಕಾಲಿಕೆ ಸಿದ್ಧಪಡಿಸಿದ ಸಾವಿನ ಗುಣಮಟ್ಟ ಸೂಚ್ಯಂಕ-2015 ರ ಪ್ರಕಾರ ಒಟ್ಟು 80 ದೇಶಗಳ ಪಟ್ಟಿಯಲ್ಲಿ ಭಾರತ 67 ನೆಯ ಸ್ಥಾನ ಗಳಿಸಿದೆ. (ಹಳ್ಳಿಗಳಲ್ಲಿ ಸ್ಮಶಾನವಿಲ್ಲದ ಕನಿಷ್ಟ ಜಾತಿಗಳು ಹೆಣವನ್ನು ಮುಂದಿಟ್ಟುಕೊಂಡು ಹೂಳುವ ಜಾಗಕ್ಕಾಗಿ ಪರದಾಡುವುದನ್ನು ನೆನಪಿಸಿಕೊಳ್ಳಬಹುದು.) ಭಾರತದಲ್ಲಿ ದುಡಿಯುವ ಶಕ್ತಿ ಕಳೆದುಕೊಂಡ ಕೂಡಲೇ ವೃದ್ಧರು ಬೀದಿಪಾಲಾಗುತ್ತಾರೆ. ಮನೆಯಲ್ಲಿದ್ದರೂ ಮಕ್ಕಳ ಪಾಲನೆ, ಪೋಷಣೆ ಸರಿಯಾಗಿ ದೊರಕುವುದಿಲ್ಲ ಎಂದು ಸೂಚ್ಯಂಕ ಹೇಳುತ್ತದೆ. ಇದಕ್ಕೆ ಕಾರಣಗಳು ಸ್ಪಷ್ಟ; ಮೂಲ ಸೌಕರ್ಯದ ಕೊರತೆ, ಆಸ್ಪತ್ರೆಗಳ ಕೊರತೆ, ತಜ್ಞ ಸಿಬ್ಬಂದಿಗಳ ಕೊರತೆ ಇತ್ಯಾದಿ.

ಇನ್ನು ಮಕ್ಕಳ ಸ್ಥಿತಿಯೇನೂ ಗುಲಾಬೀಕಳೆಯನ್ನು ತೋರುವುದಿಲ್ಲ. ಪ್ರಪಂಚದ ಶೇ. 20ರಷ್ಟು ಮಕ್ಕಳ ಸಾವು ಭಾರತದಲ್ಲೆ ಆಗುತ್ತದೆ. ಹೆಚ್ಚಿನ ಗ್ರಾಮೀಣ ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತವೆ. ಶೇ. 19 ರಷ್ಟು ಮಕ್ಕಳು ಶಾಲೆಯ ಮುಖವನ್ನೆ ಕಾಣುವುದಿಲ್ಲ. ಶೇ. 70 ಮಕ್ಕಳು ಮೆಟ್ರಿಕ್ ಹಂತದಲ್ಲಿ ಶಾಲೆಯಿಂದ ಹೊರಬೀಳುತ್ತವೆ. ಮಕ್ಕಳ ಮೇಲಿನ ಲೈಂಗಿಕ ಶೋಷಣೆ ಭಾರತದಲ್ಲೆ ಹೆಚ್ಚು. ಶೇ. 65 ರಷ್ಟು ಹೆಣ್ಣುಮಕ್ಕಳಿಗೆ ಹದಿನೆಂಟು ತುಂಬುವ ಮುನ್ನವೆ ಮದುವೆ ಮಾಡಲಾಗುತ್ತದೆ. ಲಿಂಗಾನುಪಾತ ಶೋಚನೀಯ; ಪ್ರತಿ ಸಾವಿರ ಗಂಡುಮಕ್ಕಳಿಗೆ ಕೇವಲ 927 ಹೆಣ್ಣುಮಕ್ಕಳಿದ್ದಾರೆ. ಬಾಲಕಾರ್ಮಿಕರ ರಕ್ಷಣೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಸಾಧನೆಗಾಗಿ ಕಳೆದ ವರ್ಷದ ನೊಬೆಲ್ ಶಾಂತಿ ಪುರಸ್ಕಾರ ಕೈಲಾಸ್ ಸತ್ಯಾರ್ಥಿ ಅವರಿಗೆ ದೊರಕಿದಾಗ ದೇಶ ಅಷ್ಟೇನು ಸಂಭ್ರಮಿಸಲಿಲ್ಲ. ಕಾರಣ, ನಮ್ಮ ಒಳಗಿನ ಹುಳುಕುಗಳನ್ನು ಹೇಳಿಕೊಳ್ಳುವುದು ಅವಮಾನಕರವೆಂದು ನಾವು ಭಾವಿಸುತ್ತೇವೆ. ಭಿಕ್ಷುಕರ ದೇಶ ಎಂಬ ಅಭಿದಾನವನ್ನು ಇನ್ನೂ ಅಳಿಸಲಾಗಿಲ್ಲ.

ಬಡತನ ಮತ್ತು ಅನಕ್ಷರತೆ ಎಂಬ ಭಾರತಾಂಬೆಯ ಹೆಗಲೇರಿದ ಎರಡು ಬಗಲ ಚೀಲಗಳು ಶೇ. 35 ಕ್ಕಿಂತಲೂ ಹೆಚ್ಚು ಭರ್ತಿ. 2008 ರ ಯೂನಿಸೆಫ್ ವರದಿಯ ಪ್ರಕಾರ ಭಾರತದಲ್ಲಿ ಶೇ. 55 ರಷ್ಟು ಜನರಿಗೆ ಬಯಲೇ ಶೌಚಾಲಯ. ಇದು ದೇಶದ ಆರೋಗ್ಯವನ್ನು ಬಿಂಬಿಸುವ ಮಾನದಂಡಗಳಲ್ಲೊಂದು. ಉತ್ತರ ಭಾರತದಲ್ಲಿ ಮಹಿಳೆಯರು ಮುಖಕ್ಕೆ ಸೆರಗಿನ ಪರದೆ ಎಳೆದುಕೊಳ್ಳುವುದು ಗಂಡಸರಿಗೆ ಹೆಮ್ಮೆ. ಆದರೆ ಮುಚ್ಚಿಡಬೇಕಾದದ್ದನ್ನು ಬಯಲಿನಲ್ಲಿ ಬಿಚ್ಚಬೇಕಾದ ಅನಿವಾರ್ಯತೆ. ಸ್ವಚ್ಛ ಭಾರತ ಅಭಿಯಾನ ಮತ್ತೆ ಶುರುವಾಗಿದೆ. ಎಲ್ಲೆಂದರಲ್ಲಿ ಉಗುಳುವುದು, ಕಸ ಚೆಲ್ಲುವುದು, ಮೂತ್ರವಿಸರ್ಜನೆಯನ್ನು ತಡೆಯಲು ಗೋಡೆಗಳಿಗೆ ದೇವರ ಪಟ ಚಿತ್ರಿಸಬೇಕಾದ ಪರಿಸ್ಥಿತಿ ಇರುವುದು ನಮ್ಮ ಮನಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ.

ಹೀಗಿದ್ದರೂ, ನಮಗೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಶಾಶ್ವತ ಕುಳಿತು ಜಗತ್ತಿಗೆ ಬುದ್ಧಿ ಹೇಳುವ, ನೀತಿನಿಯಮಗಳನ್ನು ರೂಪಿಸುವ ತವಕವಿದೆ, ಆತುರವೂ ಇದೆ! ಒಳ್ಳೆಯ ಆಡಳಿತಕ್ಕೆ ಮೊದಲು ತನ್ನ ಮನೆಯನ್ನು ಸದೃಢಗೊಳಿಸಬೇಕೆಂಬ ಸಂಕಲ್ಪ, ಆತುರವಿರಬೇಕು.

■ ಮೂಚಿ

## ಮಾತೇ ಮುತ್ತು

★ ಜೀವನವೆಂದರೆ ಶೇಕಡಾ 10ರಷ್ಟು ನಡೆದ ಘಟನೆಗಳು ಮತ್ತು ಶೇಕಡಾ 90ರಷ್ಟು ಅದಕ್ಕೆ ನಿಮ್ಮ ಪ್ರತಿಕ್ರಿಯೆಗಳು.

-ಲೋ ಹಾಜ್

★ ನಿಮ್ಮ ಜೀವನವೇ ಪ್ರಪಂಚಕ್ಕೆ ಒಂದು ಸಂದೇಶ. ಅದನ್ನು ಸ್ಫೂರ್ತಿದಾಯಕವಾಗಿಸಿ.

-ಲೋರಿನ್ ಲೀ

★ ಒಂದೋ ಸಹೋದರರಂತೆ ಒಟ್ಟಿಗೆ ಬಾಳಲು ಕಲಿಯಿರಿ. ಇಲ್ಲವೇ ಮೂರ್ಖರಂತೆ ಒಟ್ಟಿಗೆ ನಾಶವಾಗಿ.

-ಮಾರ್ಟಿನ್ ಲೂಥರ್ ಕಿಂಗ್ ಜೂ.

★ ಒಂದೇ ಒಂದು ಹೂವು ಅರಳುವ ಪವಾಡವನ್ನು ನೀವು ಸ್ಪಷ್ಟವಾಗಿ ಕಾಣಬಲ್ಲಿರಾದರೆ, ಇಡೀ ಜಗತ್ತೇ ಬದಲಾಗುತ್ತದೆ.

-ಗೌತಮ ಬುದ್ಧ

★ ಜೀವನಕ್ಕಿಂತ ಹೊರತಾದ ಸಂಪತ್ತು ಯಾವುದೂ ಇಲ್ಲ.

-ಜಾನ್ ರಸ್ಕಿನ್

★ ಕೆಲವರು ಯಶಸ್ಸಿನ ಕನಸು ಕಾಣುತ್ತಾ ಮಲಗಿರುತ್ತಾರೆ. ಇನ್ನು ಕೆಲವರು ಬೇಗ ಎದ್ದು ಅದಕ್ಕಾಗಿ ಕಠಿಣ ಶ್ರಮ ಪಡುತ್ತಿರುತ್ತಾರೆ.

-ಅನಾಮಿಕ

★ ಅಸಾಧ್ಯ ಎನ್ನುವ ಶಬ್ದ ನನ್ನ ನಿಘಂಟಿನಲ್ಲಿ ಇಲ್ಲ.

-ನೆಪೋಲಿಯನ್ ಬೋನಪಾರ್ಟ್

★ ನರಕದ ಮೂಲಕ ಹಾದು ಹೋಗುತ್ತಿದ್ದೀರಾದರೆ, ಹಾಗೆಯೇ ಮುಂದಕ್ಕೆ ಹೋಗುತ್ತಿರಿ.

-ವಿನ್‌ಸ್ಟನ್ ಚರ್ಚಿಲ್

★ ಜೀವನವೆಂದರೆ ವಿದೇಶೀ ಭಾಷೆ ಇದ್ದಂತೆ. ಎಲ್ಲರೂ ಅದನ್ನು ತಪ್ಪಾಗಿ ಉಚ್ಚರಿಸುತ್ತಾರೆ.

-ಕ್ರಿಸ್ಟೋಫರ್ ಮರ್ಲೀ

★ ಜೀವನ ಇರುವುದು ಭಯಪಡಲು ಅಲ್ಲ. ಅದು ಇರುವುದು ಅರ್ಥ ಮಾಡಿಕೊಳ್ಳಲು.

-ಮೇರಿ ಕ್ಯೂರಿ

ಬೆನ್ನಟ್ಟುವ ಧೈರ್ಯವಿದ್ದಲ್ಲಿ ನಮ್ಮ ಎಲ್ಲ ಕನಸುಗಳೂ ನನಸಾಗುತ್ತವೆ.

-ವಾಲ್ಟ್ ಡಿಸ್ನಿ

★ ನಮ್ಮ ಗುರಿ ಅತ್ಯಂತ ಎತ್ತರದಲ್ಲಿದ್ದು ಅದನ್ನು ನಾವು ತಲುಪಲು ಆಗದೆ ಇರುವುದು ಅಪಾಯಕಾರಿ ಅಲ್ಲ. ನಮ್ಮ ಗುರಿ ಅತ್ಯಂತ ಕೆಳಮಟ್ಟದಲ್ಲಿದ್ದು ಅದನ್ನು ತಲುಪುತ್ತಿರುವುದು ಅಪಾಯಕಾರಿ.

-ಮೈಕೆಲೇಂಜಲೊ